ದಿನಾಂಕ 21-11-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರ ಮೇಡಮ್ ಐ.ಕೆ.ಎಸ್. ವಕೀಲರವರಿಂದಃ**

ನಾನು ಈ ದಾವೆಯಲ್ಲಿ ವಾದಿಯಾಗಿರುತ್ತೇನೆ. ನಾನು ಸಹಿ ಮಾಡಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದೆ ಮತ್ತು ಅದರಲ್ಲಿರುವ ವಿಷಯಗಳು ಸರಿ ಇವೆ.

ದಿನಾಂಕ 14.01.1964 ರ ಮೂಲ ಗೇಣಿಯ ಚೀಟಿಯು ಎಲ್ಲಿ ಇದೆ ಎಂದು ನನಗೆ ತಿಳಿದಿಲ್ಲ. ಆದ್ದರಿಂದ ಅದರ ದೃಢೀಕೃತ ನಕಲನ್ನು ಸಲ್ಲಿಸಿರುತ್ತೇನೆ ಅದನ್ನು ನಿಪಿ.1 ಎಂದು, ನಮೂನೆ 7 ರ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ.2 ಎಂದು, ಭೂನ್ಯಾಯಮಂಡಳಿಯವರು ಮಾಡಿರುವ ಆದೇಶದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ.3 ಎಂದು, ನನ್ನ ತಂದೆಯವರ ಪರವಾಗಿ ನನ್ನ ತಾಯಿಯವರು ಭೂನ್ಯಾಯಮಂಡಳಿಯಲ್ಲಿ ನೀಡಿರುವ ಹೇಳಿಕೆಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ.4 ಎಂದು, ಖಾತಾ ತಃಖ್ತೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ.5 ಎಂದು, ನಮೂನೆ 10 ರ ಮೂಲಪ್ರತಿ ಎಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ಆದ್ದರಿಂದ ಅದರ ದೃಢೀಕೃತ ನಕಲನ್ನು ಸಲ್ಲಿಸಿರುತ್ತೇನೆ ಅದನ್ನು ನಿಪಿ.6 ಎಂದು, ನನ್ನ ತಾಯಿಯವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ.7 ಎಂದು, ನನ್ನ ಅಣ್ಣನವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ.8 ಎಂದು, ಕುಟುಂಬದ ಜೀವಂತ ಸದಸ್ಯರ ದೃಢೀಕರಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ.9 ಎಂದು, ಸರ್ವೇ ನಂಬ್ರ 83/3 ಟಿ2 ರ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ.10 ಎಂದು ಗುರ್ತಿಸಲಾಯಿತು. ಆದ್ದರಿಂದ ದಾವೆಯಲ್ಲಿ ಕೋರಿರುವಂತೆ ಆದೇಶ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಪಾಟೀ ಸವಾಲುಃ ಪ್ರತಿವಾದಿ 1,4,5,6 ಮತ್ತು 7 ರವರ ಪರ ವಕೀಲರು ಸಮಯ ಕೋರಿದ್ದು ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ.ಮತ್ತು ಎಸಿಜೆಎಂ,
ಉಡುಪಿ.